ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ:080-22372738, E-mail: nregs-kar@nic.in

ಸಂಖ್ಯೆ: ಗ್ರಾಅಪ:509:ಉಖಾಯೋ:2015 ದಿನಾಂಕ: 11.12.2015

## ಪತ್ರಿಕಾ ಪ್ರಕಟಣೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಕಂಡು ಬರುವ ಕುಂದುಕೊರತೆಗಳ ನಿವಾರಣೆ ಮತ್ತು ದೂರುಗಳ ವಿಲೇವಾರಿಗಾಗಿ ಈ ಕೆಳಕಂಡ ಜಿಲ್ಲೆಗಳಿಗೆ ಒಂಬುಡ್ಸ್‌ಮನ್‌ರವರನ್ನು ಆಯ್ಕೆ ಮೂಲಕ ನೇಮಿಸಲು ಅರ್ಜಿಗಳನ್ನು ಆಹ್ವಾನಿಸಿದೆ.

ಒಂಬುಡ್ಸ್‌ಮನ್ ಹುದ್ದೆ ಖಾಲಿ ಇರುವ ಜಿಲ್ಲೆಗಳ ಹೆಸರು: **ಗದಗ, ಹಾವೇರಿ, ರಾಮನಗರ, ದಾರವಾಡ, ಬಳ್ಳಾರಿ,ರಾಯಚೂರು, ಬೀದರ್, ಕಲಬುರಗಿ.**

**<u>ಅರ್ಹತೆಗಳು:</u>**

1. ಈ ಕೆಳಕಂಡ ಯಾವುದಾದರೊಂದು ಕ್ಷೇತ್ರದಲ್ಲಿ ಕಡೆಯ ಪಕ್ಷ 20 ವರ್ಷಗಳ ಸೇವಾನುಭವ ಹೊಂದಿರಬೇಕಾಗಿರುತ್ತದೆ.

   ಅ) ಸಾರ್ವಜನಿಕ ಆಡಳಿತ
   ಆ) ಕಾನೂನು
   ಇ) ಶೈಕ್ಷಣಿಕ ಕ್ಷೇತ್ರ
   ಈ) ಸಮಾಜ ಸೇವೆ/ಮ್ಯಾನೇಜ್‌ಮೆಂಟ್.

1. ಸಾರ್ವಜನಿಕರೊಂದಿಗೆ/ಸಮುದಾಯದ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಿದ ಅನುಭವವು ಒಂದು ಕಡ್ಡಾಯ ಅರ್ಹತೆಯಾಗಿರುತ್ತದೆ.
2. ಅರ್ಜಿ ಸಲ್ಲಿಸುವವರು ಯಾವುದೇ ರಾಜಕೀಯ ಪಕ್ಷದ ಮತ್ತು ನಿಷೇಧಿತ ಸಂಘ ಸಂಸ್ಥೆಗಳ ಸದಸ್ಯರಾಗಿರಬಾರದು.
3. ತಪಾಸಣೆ, ಕ್ಷೇತ್ರ ಭೇಟಿ ಹಾಗೂ ವೀಕ್ಷಣೆ ಕೆಲಸಗಳಿಗೆ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಳ್ಳಲು ಸಮರ್ಥರಾಗಿರಬೇಕು.
4. ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ಗರಿಷ್ಠ ವಯಸ್ಸು 66 ವರ್ಷ ಮೀರಿರಬಾರದು.
5. ನೇಮಕಾತಿಯು ಮೊದಲಿಗೆ 2 ವರ್ಷದ ಅವಧಿಯದಾಗಿರುತ್ತದೆ. ಆದರೆ ಕಾರ್ಯನಿರ್ವಹಣೆಯು ಅತೃಪ್ತಿಕರವಾಗಿ ಕಂಡು ಬಂದಲ್ಲಿ ಅವಧಿಗೆ ಮುನ್ನವೇ ಹುದ್ದೆಯಿಂದ ಬಿಡುಗಡೆ ಮಾಡಲಾಗುವುದು.
6. ಕೇಂದ್ರ/ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳ ಅನುಸಾರ ಸಂಭಾವನೆ ನೀಡಲಾಗುವುದು.

ಜಿಲ್ಲಾ ಮಟ್ಟದಲ್ಲಿ ಒಂಬುಡ್ಸ್‌ಮನ್‌ಗಳಾಗಿ ಕಾರ್ಯನಿರ್ವಹಿಸಲು ಆಸಕ್ತಿ ಇರುವ ವ್ಯಕ್ತಿಗಳು ಇಲಾಖೆಯ ವೆಬ್‌ಸೈಟ್ www.karnregs.kar.nic.in ನಲ್ಲಿ ನಿಗಧಿತ ನಮೂನೆಯ ಅರ್ಜಿಯನ್ನುಅವರೋಹಣ (download) ಮಾಡಿಕೊಂಡು, ತಮ್ಮ ವ್ಯಕ್ತಿತ್ವ ಪರಿಚಯದ, ಕನಿಷ್ಠ 20 ವರ್ಷಗಳು ಕಾರ್ಯನಿರ್ವಹಿಸಿದ ಅನುಭವದ ದಾಖಲೆ ಹಾಗೂ ಇತರೆ ಅವಶ್ಯಕ ಎಲ್ಲಾ ಪೂರಕ ದಾಖಲೆಗಳೊಂದಿಗೆ **ದಿನಾಂಕ:31.12.2015 ರೊಳಗೆ** ತಲುಪುವಂತೆ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, 3ನೇ ಹಂತ, 2ನೇ ಮಹಡಿ, ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರಿಗೆ ಸಲ್ಲಿಸುವುದು. ನಿಗಧಿ ಪಡಿಸಿರುವ ದಿನಾಂಕದ ನಂತರ ತಡವಾಗಿ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು (ಆಡಳಿತ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಇವರನ್ನು ಸಂಪರ್ಕಿಸಬಹುದಾಗಿದೆ, ದೂರವಾಣಿಸಂಖ್ಯೆ:080-22342163)

ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

D:26.08.2015:App omb:App omb